# ಸ್ವಚ್ಛ ಹಾಗೂ ಹಸಿರು ಗ್ರಾಮ

**ನಮ್ಮ ಮಕ್ಕಳ ಭವಿಷ್ಯಕ್ಕಾಗಿ, ಪ್ರಕೃತಿಯ ಔದಾರ್ಯದೊಂದಿಗೆ ನವೀಕರಿಸಬಹುದಾದ ಇಂಧನವನ್ನು ಬಳಸಿ, ಸ್ವಚ್ಛ, ಪರಿಸರ ಮತ್ತು ಹವಾಮಾನ ಸ್ಥಿತಿಸ್ಥಾಪಕತ್ವವನ್ನು ರಕ್ಷಿಸುವ ಸಮೃದ್ಧ ಮತ್ತು ಹಸಿರು ಗ್ರಾಮವನ್ನು ನಿರ್ಮಿಸುವುದು.**






# ವಿಷಯದ ಮುಖ್ಯ ಗಮನ

- ಗ್ರಾಮಗಳಲ್ಲಿ ಜೀವನೋಪಾಯಕ್ಕಾಗಿ ಮತ್ತು ಆಹಾರ ಭದ್ರತೆಗಾಗಿ ನೈಸರ್ಗಿಕ ಸಂಪನ್ಮೂಲಗಳ ಸುಸ್ಥಿರ ನಿರ್ವಹಣೆ
- ನವೀಕರಿಸಲಾಗದ ಸಂಪನ್ಮೂಲಗಳ ತರ್ಕಬದ್ಧ ಶೋಷಣೆ
- ಹವಾಮಾನ ಬದಲಾವಣೆಗೆ ಹೊಂದಿಕೊಳ್ಳುವಿಕೆ
- ಗ್ರಾಮಗಳಲ್ಲಿ ನವೀಕರಿಸಬಹುದಾದ ಸಂಪನ್ಮೂಲಗಳ ತೀವ್ರ ಬಳಕೆ
- ಜೀವವೈವಿಧ್ಯ ನೋಂದಣಿಯ ನಿರ್ವಹಣೆ
- ಸುರಕ್ಷಿತ ಮತ್ತು ಸಮರ್ಪಕ ಕುಡಿಯುವ ನೀರು, ನೈರ್ಮಲ್ಯ ಸೇವೆಗಳು ಮತ್ತು ಶುದ್ಧ ಗಾಳಿ ಪಡೆಯುವುದು.



# ಸ್ಥಳೀಯ ಹಾಗೂ ಸಾಧಿಸಬೇಕಾದ ಗುರಿಗಳು

- ನವೀಕರಿಸಬಹುದಾದ ಶಕ್ತಿ ಮತ್ತು ಪರಿಸರದ ಮೇಲೆ ಕೇಂದ್ರೀಕರಿಸುವ ಗ್ರಾಮ ಕ್ರಿಯಾ ಯೋಜನೆಯನ್ನು (VAP) ಸಿದ್ಧಪಡಿಸುವುದು ಮತ್ತು ಮೇಲ್ವಿಚಾರಣೆ ಮಾಡುವುದು ಮತ್ತು ಅದನ್ನು ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆ ( GPDP) ಯೊಂದಿಗೆ ಸಮನ್ವಯಗೊಳಿಸುವುದು.
- ಪ್ರಧಾನ ಮಂತ್ರಿ ಕಿಸಾನ್ ಊರ್ಜಾ ಸುರಕ್ಷಾ ಏವಂ ಉತ್ಥಾನ್ ಮಹಾಭಿಯಾನ್ (ಕುಸುಮ್) ಯೋಜನೆ (MP KUSUM) ಯೋಜನೆಯನ್ನು ಪಡೆಯಲು ರೈತರನ್ನು ಪ್ರೇರೇಪಿಸುವುದು.
- ಜೈವಿಕ ಅನಿಲ ಉತ್ಪಾದನೆಗೆ ಸ್ಥಾವರಗಳನ್ನು ಸ್ಥಾಪಿಸುವುದು.

# ಸ್ಥಳೀಯ ಹಾಗೂ ಸಾಧಿಸಬೇಕಾದ ಗುರಿಗಳು

- ತಡೆಗಟ್ಟುವುದು, ಕಡಿತಗೊಳಿಸುವುದು, ಮರುಬಳಕೆ ಮಾಡುವುದರ ಮೂಲಕ ಪುನರುತ್ಪಾದನೆ ಮೂಲಕ ತ್ಯಾಜ್ಯ ಉತ್ಪಾದನೆಯನ್ನು ಕಡಿಮೆ ಮಾಡುವುದು.
- ತ್ಯಾಜ್ಯ ಸಂಗ್ರಹಣಾ ಕಾರ್ಯವಿಧಾನಗಳನ್ನು ಬಲಪಡಿಸುವುದು - ಮನೆಗಳು ಮತ್ತು ಸಮುದಾಯ ಮಟ್ಟದ ಸಂಗ್ರಹಣೆ
- ಜೈವಿಕ ಅನಿಲ ಸ್ಥಾವರ ಸೌಲಭ್ಯಗಳ ನಿರ್ಮಾಣ
- ಪುನರುತ್ಪಾದನೆ ಮತ್ತು ಮರುಬಳಕೆಯಿಂದ ತ್ಯಾಜ್ಯವನ್ನು ಕಡಿಮೆ ಮಾಡುವ ಬಗ್ಗೆ ಜಾಗೃತಿ ಮೂಡಿಸುವುದು.



# ಗ್ರಾಮ ಪಂಚಾಯಿತಿಗಳಲ್ಲಿ ಸ್ಥಳೀಯವಾಗಿ ಕ್ರಮಕೈಗೊಳ್ಳಬೇಕಾದ  ಅಂಶಗಳು

## ಖಾತರಿಪಡಿಸಿಕೊಳ್ಳಬೇಕಾದ ಅಂಶಗಳು:

- ಸೌರ ಶಕ್ತಿಯ ಬಳಕೆಯನ್ನು ಉತ್ತೇಜಿಸುವುದು.
- ವಿದ್ಯುಚ್ಛಕ್ತಿಯ ಸಮರ್ಥ ವಿತರಣೆ.
- ಪರಿಣಾಮಕಾರಿ ತ್ಯಾಜ್ಯ ನಿರ್ವಹಣಾ ವ್ಯವಸ್ಥೆ

## ಉತ್ತೇಜನ ನೀಡಬೇಕಾದ ಅಂಶಗಳು:

ಸ್ಥಳೀಯ ಜಲ ಸಂಪನ್ಮೂಲವನ್ನು ಬಳಸಿಕೊಳ್ಳುವುದು.

- ಅರಣ್ಯಗಳು, ಜಲಮೂಲಗಳು ಮತ್ತು ಪವಿತ್ರ ತೋಪುಗಳು ಸೇರಿದಂತೆ ನೈಸರ್ಗಿಕ ಸಂಪನ್ಮೂಲಗಳ ಸಮುದಾಯ ಆಧಾರಿತ ನಿರ್ವಹಣೆ.

- ಎತ್ತರದ ಇಳಿಜಾರು ಪ್ರದೇಶಗಳಲ್ಲಿ, ಬಂಜರು ಮತ್ತು ಇತರ ಸಾಮಾನ್ಯ ಭೂಮಿಗಳಲ್ಲಿ ಮತ್ತು ರಸ್ತೆಗಳ ಪಕ್ಕದಲ್ಲಿ ನೈಸರ್ಗಿಕ ಸಸ್ಯಗಳನ್ನು ನೆಡುವುದು.

- ಸಾರ್ವಜನಿಕ ಜೀವವೈವಿಧ್ಯ ನೋಂದಣಿಯನ್ನು ನಿರ್ವಹಿಸುವುದು.



# ಗ್ರಾಮ ಪಂಚಾಯಿತಿಗಳ ಪಾತ್ರ

- ಸಾವಯವ ಕೃಷಿ ಮತ್ತು ಸುಸ್ಥಿರ ಮೀನುಗಾರಿಕೆಯನ್ನು ಉತ್ತೇಜಿಸುವುದು.
- ಮೀನುಗಾರಿಕೆಗಾಗಿ ಸಮುದಾಯ ಕೆರೆಗಳನ್ನು ಪ್ರೋತ್ಸಾಹಿಸುವುದು.
- ಏಕ ಬಳಕೆಯ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸುವುದು.
- ನೈಸರ್ಗಿಕ ಸಂರಕ್ಷಣೆಯ ಮರುಸ್ಥಾಪನೆಗಾಗಿ ರಚಿಸಲಾದ ಸ್ಥಾಯಿ ಸಮಿತಿ/ಕಾರ್ಯಕಾರಿ ಸಮಿತಿಗಳನ್ನು ಬಲಪಡಿಸುವುದು.
- ಜನರ ಜೈವಿಕ ವೈವಿಧ್ಯತೆಯ ನೋಂದಣಿಯನ್ನು ನಿರ್ವಹಿಸುವುದು.
- ಮರುಭೂಮಿಯನ್ನು ಅಭಿವೃದ್ಧಿಪಡಿಸುವುದು, ನಾಶವಾದ ಭೂಮಿ ಮತ್ತು ಮಣ್ಣನ್ನು ಪುನಃಸ್ಥಾಪಿಸುವುದು.
- ಜಲ-ಸಂಬಂಧಿತ ಪರಿಸರ ವ್ಯವಸ್ಥೆಗಳ ರಕ್ಷಣೆ ಮತ್ತು ಮರುಸ್ಥಾಪನೆ.
- ನೀರಿನ ಮರು ಉತ್ಪಾದನೆ ಮತ್ತು ಸುರಕ್ಷಿತ ಮರುಬಳಕೆ.
- ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಭೂ ಬಳಕೆ, ಜಲಮೂಲಗಳು, ಅರಣ್ಯ, ಇಳಿಜಾರು, ನಿರಾವರಿ ಭೂಮಿ, ಕೆಳದರ್ಜೆಯ ಅರಣ್ಯದ ನಕ್ಷೆ ತಯಾರಿಸುವುದು.



# ಗ್ರಾಮ ಪಂಚಾಯಿತಿಗಳು ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಅವಕಾಶಗಳು

- ಗ್ರಾಮದ ಆಧಾರ ಸ್ತಂಭವಾಗಿರುವ ಗ್ರಾಮಸ್ಥರಲ್ಲಿ ವಿದ್ಯಾರ್ಥಿಗಳು ಮತ್ತು ಮಹಿಳೆಯರಲ್ಲಿ ಜಾಗೃತಿ ಮೂಡಿಸುವುದು.
- ಸ್ಥಳೀಯ ಸಮುದಾಯ ಮತ್ತು ಚುನಾಯಿತ ಪ್ರತಿನಿಧಿಗಳನ್ನು ತೊಡಗಿಸಿಕೊಂಡು ತರಬೇತಿ ನೀಡುವುದು.
- ಸ್ಥಳೀಯ ಮತ್ತು ಜಿಲ್ಲಾ/ಬ್ಲಾಕ್ ಮಟ್ಟದ ಅಧಿಕಾರಿಗಳ ಮೂಲಕ ಸಮುದಾಯವನ್ನು ಮೇಲ್ವಿಚಾರಣೆ ಮಾಡುವುದು.





# ಗ್ರಾಮ ಪಂಚಾಯಿತಿಗೆ ಯಾರೆಲ್ಲ ಬೆಂಬಲ ನೀಡಬಹುದು


**ಮೂರು ಹಂತದ ವಿಧಾನವನ್ನು ಅಳವಡಿಸಿಕೊಳ್ಳುವುದು:**

- ಸಮುದಾಯ ಆಧಾರಿತ ಮೇಲ್ವಿಚಾರಣೆ: ಸಾಮಾಜಿಕ ಮಾಧ್ಯಮ, ವಾಟ್ಸ್ ಅಪ್ ಮತ್ತು ಸ್ವಚ್ಛತಾ ಡೂಟ್ಸ್ ಮೂಲಕ
- ಕ್ಷೇತ್ರ ಮಟ್ಟದ ಮೇಲ್ವಿಚಾರಣೆ – ಅಂಗನವಾಡಿ ಕಾರ್ಯಕರ್ತೆಯರು(ICDS) ಆಶಾ ಕಾರ್ಯಕರ್ತೆಯರು, ಶಾಲಾ ಶಿಕ್ಷಕರು ಮತ್ತು ಸಾರ್ವಜನಿಕ ಪಡಿತರ ವಿತರಕರುಗಳನ್ನು ತೊಡಗಿಸಿಕೊಳ್ಳುವುದು. ಪ್ರತಿ ಗ್ರಾಮ ಪಂಚಾಯಿತಿ ಹಾಗೂ ಕ್ಲಸ್ಟರ್ ಮಟ್ಟದಲ್ಲಿರುವ ಮೇಲ್ವಿಚಾರಕರುಗಳೊಂದಿಗೆ ನಿಯಮಿತವಾಗಿ ಸಭೆ ನಡೆಸುವುದು.
- ಜಿಲ್ಲಾ/ತಾಲ್ಲೂಕು ಮಟ್ಟದ ಮೇಲ್ವಿಚಾರಣೆ - ಜಿಲ್ಲಾ ಸಂಪನ್ಮೂಲ ತಂಡ, ತಾಲ್ಲೂಕು ಪರಿಶೀಲನಾ ಸಮಿತಿಗಳಿಂದ ಮೇಲ್ವಿಚಾರಣೆ ಮಾಡುವುದು.



# ಗ್ರಾಮ ಪಂಚಾಯಿತಿಗಳಿಂದ ನರ್ಸರಿಗಳನ್ನು ಬೆಳೆಸುವುದು.






ಪರಿವೀಕ್ಷ
ಣೆ
ಅಗತ್ಯಗಳ ಗುರುತಿಸುವಿಕೆ
ಮುಂಚೂಣಿ ಕಾರ್ಯಕರ್ತರು ಸಮುದಾಯದ ಭಾಗವಹಿಸುವಿಕೆ
ಜಾಗೃತಿ ಅಭಿಯಾನ
ಪ್ರಾರಂಭಿಕ ಚಟುವಟಿಕೆಗಳು
ಕಡಿಮೆ ವೆಚ್ಚ- ವೆಚ್ಚ ರಹಿತ
ಸಮಿತಿಗಳ ಬಲವರ್ಧನೆ
ಯೋಜನೆ ತಯಾರಿ ಮತ್ತು ಅನುಷ್ಠಾನ
ಸ್ವಚ್ಛ ಮತ್ತು ಹಸಿರು ಗ್ರಾಮ ಮತ್ತು ಜಿಪಿಡಿಪಿ

# LET US TOGETHER MAKE

**Sanitation is more important than Independence**




**Cleanliness is next to Godliness**